# ಫುಸ್ಕೋಸ್ ಶಾಲೆ

ಇಂದಿರನಗರ ಬೆಂಗಳೂರು

ವಾರ್ಷಿಕ ಪರೀಕ್ಷೆ– ೨೦೧೭

ವಿಷಯ : ಕನ್ನಡ ದ್ವಿತೀಯ ಭಾಷೆ

ಅಂಕಗಳು–80

ತರಗತಿ : VI ಅವಧಿ : 2hours

**I. ಅರ್ಥ ಬರೆಯಿರಿ.** **5**

೧. ದಂಡಿಸು = ೨. ಹವಣಿಸು = ೩. ಆತಂಕ = ೪. ಸರ್ವರು = ೫.ನಿಸರ್ಗ =
೬. ಸಹನೆ = ೭. ವಿಸ್ಮಯ = ೮. ಮಿಥ್ಯ = ೯. ಸಮುದಾಯ = ೧೦. ಬೋಧಿಸು =

**II. ಬಿಟ್ಟಸ್ಥಳ ತುಂಬಿರಿ.** **2½**

೧. ವನಗಳ ಸಂಪತ್ತಿನಿಂದ ______ಕ್ಕೆ ಹೇರಳ ಲಾಭವಿದೆ.
೨. _____ ಹೇಳಿದ ಬುದ್ಧಿವಾದ ವ್ಯರ್ಥವಾಗಲಿಲ್ಲ.
೩. _____ ದ್ವೀಪದಲ್ಲಿ ಒಂದು ಬಗೆಯ ಜನರಿದ್ದಾರೆ.
೪. ಅಶ್ವಿನಿ ಕುಮಾರರು ______ ವೈದ್ಯರಾಗಿದ್ದರು.
೫. ಉಶೀನರ ಬಳಿಕ ___ ಚಕ್ರವರ್ತಿಯಾದನು.

**III. ಪದ್ಯವನ್ನು ಪೂರ್ತಿಗೊಳಿಸಿರಿ.** **6**

೧. ಸರ್ವರು ಹೊಸ ಹೊಸ
_________
_________
_________
_________
ಹೊಟ್ಟೆಗೆ ಇಳಿಸುವರು ॥

೨. ದೇವಲೋಕ ಮರ್ತ್ಯಲೋಕವೆಂಬುದು _______
______________________________
______________________________
__________________ ನೀವೇ ಪ್ರಮಾಣ ॥

**IV. ಹೊಂದಿಸಿ ಬರೆಯಿರಿ.** **2½**

| | |
|---|---|
| ೧. ಆರೋಗ್ಯ | ಪ್ರತ್ಯಕ್ಷನಾದನು |
| ೨. ಸತ್ಯ– ಧರ್ಮಗಳ | ಆನಂದಿಸುತ್ತಾರೆ |
| ೩. ಅವರ ಮಾತಿಗೆ | ಧಾಮಗಳು |
| ೪. ಮುನಿಗಳ ಮುಂದೆ | ರಕ್ಷಣೆ |
| ೫. ನೀರು ಸುರಿದು | ತಲೆಬಾಗಿದರು |

**V. ಸ್ವಂತ ವಾಕ್ಯದಲ್ಲಿ ಬರೆಯಿರಿ.** **6**

೧. ಚಕ್ರವರ್ತಿ – ೨. ಪರೀಕ್ಷೆ – ೩. ವನಗಳು – ೪. ಮನೆ – ೫. ಸಂರಕ್ಷಣೆ –
೬. ಪ್ರಪಂಚ –

**VI. ವಿರುದ್ಧಾರ್ಥಕ ಪದ ಬರೆಯಿರಿ.** **5**

೧. ಜಯ ೨. ಅಗತ್ಯ ೩. ಸಮೀಪ ೪.ಮೊದಲು ೫. ನ್ಯಾಯ
೬. ಆಸೆ ೭. ಹಿಂಸೆ ೮. ಮುಂದೆ ೯. ಉತ್ಸಾಹ ೧೦. ಪವಿತ್ರ

**VII. ಸರಿ/ ತಪ್ಪು ಗುರುತಿಸಿರಿ.** **2**

೧. ನಂಜನಗೂಡಿನಲ್ಲಿ ಒಂದು ದೊಡ್ಡ ಜಾತ್ರೆ ನಡೆಯುತ್ತದೆ.
೨. ನಂಜನಗೂಡಿನಲ್ಲಿ ಕಾವೇರಿ ನದಿ ಹರಿಯುತ್ತದೆ.
೩. ಹಳ್ಳಿಯ ಜನ ಕುರಿಯನ್ನು ಅಲಂಕರಿಸಿದ್ದರು.
೪. ದೇವಿಯು ಸಕಲ ಜೀವಿಯನ್ನು ಕಾಪಾಡುವ ತಾಯಿ.

**VIII. ವಚನ ಬದಲಾಯಿಸಿರಿ.** **4**

೧. ಮನೆ – ೨. ದ್ವೀಪಗಳು – ೩. ಅವರು – ೪. ಅದು –
೫. ದೇವಸ್ಥಾನ –
೬. ಮಕ್ಕಳು – ೭. ನಾಯಕ – ೮. ನೀನು –

**IX. ಗುಂಪಿಗೆ ಸೇರದ ಪದ ಬರೆಯಿರಿ.** **2**

೧. ಗಾಯನ, ಸಂಗೀತ, ಲಾಡು, ಹಾಡು
೨. ಅಪಾಯ, ಉಪಾಯ, ಯುಕ್ತಿ, ತಂತ್ರ
೩. ಧೈರ್ಯ, ಸಾಹಸ, ಪರಾಕ್ರಮ, ಭಯ
೪. ಮರ, ಬೆಟ್ಟ, ಗಿಡ, ಬಳ್ಳಿ

X. **ಪ್ಯಾಸೇಜ್**

ನಾಡು– ನುಡಿಯ ಹಿತಕ್ಕಾಗಿ ದುಡಿದು ಅಮರರಾದ ಅನೇಕರಲ್ಲಿ ಆಲೂರು ವೆಂಕಟರಾಯರು ಅಗ್ರಗಣ್ಯರು.

ಇವರು ಕನ್ನಡ ಕುಲಪುರೋಹಿತರೆಂದೇ ಹೆಸರಾಗಿದ್ದವರು. ಇವರ ಕನ್ನಡ ಪ್ರೇಮ ನಮಗೆ ಆದರ್ಶ. ನಾನು ಕನ್ನಡಿಗ, ಕರ್ನಾಟಕ ನಮ್ಮದು ಎಂಬ ಪ್ರಜ್ಞೆಯನ್ನು ಕನ್ನಡಿಗರಲ್ಲಿ ಮೂಡಿಸಿ ಬೆಳೆಸಿದ ಧೀಮಂತ ಕನ್ನಡಿಗರು ಇವರು.

ಈ ಮಹನೀಯರು 12-7-1880 ರಲ್ಲಿ ಬಿಜಾಪುರದಲ್ಲಿ ಜನಿಸಿದರು. ಇವರ ತಂದೆ ಭೀಮರಾಯರು.

ತಾಯಿ ಭಾಗೀರಥಿಬಾಯಿ. ಇವರ ಸ್ವಂತ ಸ್ಥಳ ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಆಲೂರು ಗ್ರಾಮ. ಪ್ರೌಢ ಶಿಕ್ಷಣದ ನಂತರ ಉನ್ನತ ವ್ಯಾಸಂಗಕ್ಕಾಗಿ ಪುಣೆಗೆ ಹೋದರು. ಅಲ್ಲಿಯ ಫರ್ಗ್ಯುಸನ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿಎ ಪದವಿ ಪಡೆದು ವಕೀಲ ವೃತ್ತಿ ಆರಂಭಿಸಿದರು. ಆ ಕಾಲಕ್ಕೆ ಭಾರತದ ಸ್ವಾತಂತ್ರ್ಯ ಚಳುವಳಿಯ ಪ್ರಭಾವ ಇವರ ಮೇಲೆ ಉಂಟಾಗಿ ಅನೇಕ ರಾಷ್ಟ್ರನಾಯಕರ ಸಂಪರ್ಕ ಬೆಳೆಯಿತು.

**ಪ್ರಶ್ನೆಗಳು;** **5**

೧. ಕನ್ನಡ ಪುರೋಹಿತರು ಎಂದು ಹೆಸರಾಗಿದ್ದ್‌ವರು ಯಾರು ?
೨. ಆಲೂರು ವೆಂಕಟರಾಯರು ಎಲ್ಲಿ, ಯಾವಾಗ ಜನಿಸಿದರು ?
೩. ವೆಂಕಟರಾಯರು ಕನ್ನಡಿಗರಲ್ಲಿ ಮೂಡಿಸಿದ ಪ್ರಜ್ಞೆ ಎಂತಹುದು ?
೪. ವೆಂಕಟರಾಯರು ಪ್ರೌಢ ಶಿಕ್ಷಣದ ನಂತರ ತಮ್ಮ ವಿದ್ಯಾಭ್ಯಾಸವನ್ನು ಎಲ್ಲಿ ಮುಂದುವರಿಸಿದರು ?
೫. ಇವರ ಮೇಲೆ ರಾಷ್ಟ್ರನಾಯಕರ ಸಂಪರ್ಕ ಹೇಗೆ ಬೆಳೆಯಿತು ?

## ವಿಭಾಗ - ಬಿ

**XI. ಒಂದು ವಾಕ್ಯದಲ್ಲಿ ಉತ್ತರಿಸಿ.** **12**

೧. ಕತ್ತೆ ಮತ್ತು ನರಿ ದಾರಿಯಲ್ಲಿ ಏನನ್ನು ಕಂಡವು ?
೨. ಗೆಳೆಯರು ಏನನ್ನು ತರುತ್ತಾರೆ ?
೩. ಗುಡ್ಡಗಾಡು ಪ್ರದೇಶದಲ್ಲಿ ಯಾರು ವಾಸವಾಗಿದ್ದರು ?
೪. ಶಿಬಿಯು ಯಾಗವನ್ನು ಎಲ್ಲಿ ನಡೆಸುತ್ತಿದ್ದನು ?
೫. ನಂಜನಗೂಡು ಯಾವ ಜಿಲ್ಲೆಯಲ್ಲಿದೆ ?
೬. ಜಾತ್ರೆಯು ಯಾರ ಮನಸ್ಸಿಗೆ ಹರ್ಷ ನೀಡುತ್ತದೆ ?
೭. ವನಗಳು ಏನನ್ನು ತಡೆಯುತ್ತವೆ ?
೮. ಭೃಗು ಋಷಿಗಳು ಮೊದಲು ಯಾರ ಲೋಕಕ್ಕೆ ಹೋದರು ?
೯. ಬಾಪೂಜಿ ಮೇಕೆಯನ್ನು ಯಾವ ಭಾವನೆಯಿಂದ ನೋಡಿದರು ?
೧೦. ಕೂಡಲಸಂಗಮದೇವ ಯಾರ ಅಂಕಿತನಾಮ ?
೧೧. ಮಿತ್ರನ ಮೇಲೆ ನೀರು ಸುರಿದು ಆನಂದಿಸುವ ಪದ್ಧತಿ ಎಲ್ಲಿದೆ ?
೧೨. ದಧೀಚಿ ಮುನಿಗಳು ಯಾವ ವಿದ್ಯೆಯನ್ನು ತಿಳಿದಿದ್ದರು ?

**XII. ಈ ಮಾತನ್ನು ಯಾರು ಯಾರಿಗೆ ಹೇಳಿದರು ?** **6**

೧. "ಇದನ್ನು ದೇವಿಗೆ ಬಲಿಕೊಡುತ್ತೇವೆ".
೨. "ಆದರೆ ನಾನು ಈ ಬಗ್ಗೆ ನನ್ನ ನಿರ್ಧಾರವನ್ನು ನಿಮಗೆ ಈಗಲೇ ತಿಳಿಸಲಾರೆ".
೩. "ಎಲೈ ರಾಜನೇ, ಪಾರಿವಾಳವು ನನಗೆ ಪ್ರಿಯವಾದ ಆಹಾರ".
೪. "ನಾವೇ ತಮ್ಮ ತಲೆಯನ್ನು ತೆಗೆದು ಕುದುರೆ ತಲೆಯನ್ನು ಜೋಡಿಸುತ್ತೇವೆ".

**XIII. ಕೆಳಗಿನ ಪ್ರಶ್ನೆಗಳಿಗೆ 2/3 ವಾಕ್ಯದಲ್ಲಿ ಉತ್ತರಿಸಿರಿ.** **12**

೧. ನಂಜನಗೂಡಿನಲ್ಲಿ ಭಕ್ತರ ಸಂಖ್ಯೆ ಯಾವ ಯಾವ ದಿನ ಹೆಚ್ಚಾಗಿರುತ್ತದೆ ?
೨. ಮಳೆಯಿಂದಾಗುವ ಪ್ರಯೋಜನವೇನು ?
೩. ಭೃಗು ಋಷಿಗಳು ವಿಷ್ಣುವೇ ಶ್ರೇಷ್ಠ ಎಂದು ಏಕೆ ತೀರ್ಮಾನಿಸಿದರು ?
೪. ಬಾಪೂಜಿ ರಸ್ತೆಯಲ್ಲಿ ಹೋಗುವಾಗ ಯಾವ ಸದ್ದುಗಳು ಮೊಳಗಿದವು ?
೫. ಬಿಹಾರ ರಾಜ್ಯದ ಕೆಲವು ಹಳ್ಳಿಗಳಲ್ಲಿ ನಮಸ್ಕಾರದ ಪದ್ಧತಿ ಹೇಗಿದೆ ?
೬. ಇಂದ್ರ ದೇವನಿಗೆ ಯಾವ ವಿಚಾರ ತಿಳಿಯಿತು ?

**XIV. ಪ್ರಬಂಧ (ಬೇಕಾದ ಒಂದಕ್ಕೆ ಮಾತ್ರ)** **5**

೧. ನನ್ನ ಜೀವನದ ಗುರಿ       ೨. ದೂರದರ್ಶನ

**XV. ಪತ್ರಲೇಖನ** **5**

೧. ನಿಮ್ಮ ಅಭ್ಯಾಸದ ಕುರಿತು ನಿಮ್ಮ ಗೆಳೆಯ/ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.
೨. ನಿಮ್ಮ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವದ ಕುರಿತು ನಿಮ್ಮ ಗೆಳೆಯ/ ಗೆಳತಿಗೆ ಒಂದು ಪತ್ರ ಬರೆಯಿರಿ.

************